

# ಇಲಿಯ ಮದುವೆ

ಒಮ್ಮೆ ಇಲಿಗಳ ಒಂದು ಕುಟುಂಬದಲ್ಲಿ ಒಂದು ಸುಂದರ ಮತ್ತು ಬಿಳಿ ಇಲಿ ಹುಟ್ಟಿತು. ಅದು ಬೆಳೆಯುತ್ತಿದ್ದಂತೆ ಅದರ ಸ್ನೇಹಿತರು ಮತ್ತು ಸಂಬಂಧಿಕರ ಗಮನ ಅದರ ಸುಂದರ ಮುಖ, ಅದರ ಗತ್ತಿನ ನಡಿಗೆ ಮತ್ತು ಅದರ ನಿಷ್ಕಳಂಕ ಬಿಳಿ ಬಣ್ಣದ ಬಗ್ಗೆ ಹೊರಳಿತು. ಅದರ ತಂದೆತಾಯಿ ಇಷ್ಟು ಸುಂದರ ಯುವಕನಿಗೆ ಯೋಗ್ಯ ಹೆಂಡತಿಯನ್ನು ಎಲ್ಲಿಂದ ಹುಡುಕಿ ತರುವುದು ಎಂದು ಚಿಂತಿಸುತ್ತಿದ್ದರು.

ಯುವ ಇಲಿ ಮದುವೆಯ ವಯಸ್ಸಿಗೆ ಬಂದಾಗ ಅದರ ತಂದೆತಾಯಿ ದೇವರೇ ಈಗ ನಮ್ಮ ಮಗನಿಗೆ ಯೋಗ್ಯ ವಧುವನ್ನು ಕರುಣಿಸುವನು ಎಂದು ಯೋಚಿಸಿದರು. ತಮ್ಮ ಕುಟುಂಬದ ಪರಂಪರೆಯಂತೆ ಮೂವರು ಹಿರಿಯರನ್ನು ಆರಿಸಿ, ತಮ್ಮ ಮಗನಿಗೆ ಯೋಗ್ಯ ವಧುವನ್ನು ದೇವರಲ್ಲಿ ಬೇಡುವಂತೆ ಕೇಳಿಕೊಂಡರು. ಆ ಹಿರಿಯರು ದೇವರ ಮನೆ ಎದುರು ಹೋಗಿ ನಿಂತರು.

ನೀವೇಕೆ ಬಾಗಿಲ ಬಳಿ ನಿಂತಿದ್ದೀರ? ದೇವರು ಪ್ರಶ್ನಿಸಿದ.

ಮೂವರು ಹಿರಿಯರು ಒಳ ಬಂದು ಹೇಳಿದರು, ನಮ್ಮನ್ನು ಸುಂದರ ಇಲಿಯ ತಂದೆತಾಯಿ ನಿಮ್ಮ ಬಳಿಗೆ ಕಳುಹಿಸಿದ್ದಾರೆ. ಆ ಇಲಿ ಹಿಮದಂತೆ ಬಿಳುಪಾಗಿದ್ದು, ಸಮಸ್ತ ಪ್ರಾಣಿಗಳಲ್ಲಿ ತುಂಬಾ ಸುಂದರವಾಗಿದೆ. ನಾವು ಅದಕ್ಕೆ ಯೋಗ್ಯ ವಧುವನ್ನು ಹುಡುಕುತ್ತಿದ್ದೇವೆ. ನಿಮ್ಮ ಪರಿವಾರದಲ್ಲಿ ಅದಕ್ಕೆ ಯೋಗ್ಯ ಹೆಂಡತಿ ಸಿಗಲು ಸಾಧ್ಯ. ಯಾಕೆಂದರೆ ನಿಮ್ಮ ಪರಿವಾರ ಇಡೀ ಜಗತ್ತಿನಲ್ಲಿ ಅತಿ ಶ್ರೇಷ್ಠ ಮತ್ತು ಬಲಶಾಲಿಯಾಗಿದೆ.

ದೇವರು ಸ್ವಲ್ಪ ಹೊತ್ತು ಯೋಚಿಸಿ ಅವರಿಗೆ ಹೇಳಿದ, 'ನಿಮ್ಮ ಮಾತು ನಿಜ. ಆದರೆ ನಮ್ಮ ಪರಿವಾರಕ್ಕಿಂತಲೂ ಹೆಚ್ಚು ಬಲಶಾಲಿಯಾದ ಪರಿವಾರವೆಂದರೆ ಗಾಳಿಯ ಪರಿವಾರ. ಯಾಕೆಂದರೆ ಪವನ ನನಗಿಂತ ಬಲಶಾಲಿ. ಗಾಳಿ ವೇಗವಾಗಿ ಚಲಿಸಿದಾಗ ನನ್ನ ಕಣ್ಣುಗಳಲ್ಲೂ ಧೂಳು ಹೋಗುತ್ತದೆ'

ಮೂವರು ಹಿರಿಯರು ಗಾಳಿಯ ಪರಿವಾರ ಇಲಿಗೆ ಯೋಗ್ಯ ವಧುವನ್ನು ಕೊಡಬಲ್ಲದು ಎಂದು ಯೋಚಿಸಿ ಗಾಳಿ ಮನೆಯ ಬಾಗಿಲ ಬಳಿಗೆ ಹೋಗಿ ನಿಂತರು.

ನೀವೇಕೆ ಬಾಗಿಲ ಬಳಿ ನಿಂತಿದ್ದೀರ? ಗಾಳಿ ಪ್ರಶ್ನಿಸಿತು.

ಮೂವರು ಹಿರಿಯರು ಒಳ ಬಂದು ಹೇಳಿದರು, 'ದೇವರು ನಮ್ಮನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ. ನೀವು ಅವನಿಗಿಂತ ಬಲಶಾಲಿಯಂತೆ. ನಾವು ನಿಮ್ಮ ಪರಿವಾರದ ಕನ್ಯೆಯನ್ನು ನಮ್ಮ ಇಲಿಗೆ ಬೇಡಲು ಬಂದಿದ್ದೇವೆ'

ಗಾಳಿ ಸ್ವಲ್ಪ ಹೊತ್ತು ಯೋಚಿಸಿ ಹೇಳಿತು, 'ನಿಮ್ಮ ಮಾತು ನಿಜ. ಆದರೆ ಒಂದು ಮಾತು ಹೇಳುತ್ತೇನೆ. ನಾನು ಬಲಶಾಲಿ ಅಲ್ಲ. ನಾನು ಪೂರ್ಣ ವೇಗದಿಂದ ಸಾಗಿದಾಗ ಸುತ್ತಮುತ್ತ ಧೂಳು ಕವಿಯುತ್ತದೆ, ಮರಗಿಡಗಳು ಕಿತ್ತು ಬೀಳುತ್ತವೆ. ಆದರೆ ನಾನು ಬೆಟ್ಟದ ಎದುರು ಏನೇನೂ ಅಲ್ಲ! ನನ್ನಿಂದ ಬೆಟ್ಟವನ್ನು ಅಲುಗಾಡಿಸಲು ಸಾಧ್ಯವಿಲ್ಲ. ಹೀಗಾಗಿ ಬೆಟ್ಟ ನನಗಿಂತಲೂ ಬಲಶಾಲಿ'

ಮೂವರು ಹಿರಿಯರು ಬೆಟ್ಟದ ಮನೆಯ ಎದುರು ಬಂದು ನಿಂತರು.

ನೀವೇಕೆ ಬಾಗಿಲ ಬಳಿ ನಿಂತಿದ್ದೀರ? ಬೆಟ್ಟ ಪ್ರಶ್ನಿಸಿತು.

ಮೂವರು ಹಿರಿಯರು ಒಳ ಬಂದು ಹೇಳಿದರು, 'ಪವನ ನಮ್ಮನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ. ನೀವು ಅವನಿಗಿಂತ ಬಲಶಾಲಿಯಂತೆ. ನಾವು ನಿಮ್ಮ ಪರಿವಾರದ ಕನ್ಯೆಯನ್ನು ನಮ್ಮ ಇಲಿಗೆ ಬೇಡಲು ಬಂದಿದ್ದೇವೆ'

ಬೆಟ್ಟ ಸ್ವಲ್ಪ ಹೊತ್ತು ಯೋಚಿಸಿ ಹೇಳಿತು, ನಿಮ್ಮ ಮಾತು ನಿಜ. ಅಷ್ಟು ಸುಂದರ ಯುವ ಇಲಿಗೆ ಯೋಗ್ಯ ಹೆಂಡತಿ ಸಿಗಲೇಬೇಕು. ಆದರೆ ನನಗಿಂತಲೂ ಬಲಶಾಲಿಯಾದ ಜೀವಿಯ ಪರಿವಾರವೊಂದಿದೆ. ಅದು ನನ್ನ ಬುಡವನ್ನು ಕೊರೆದು ನನ್ನನ್ನು ದುರ್ಬಲಗೊಳಿಸುತ್ತಿರುತ್ತದೆ'

ಆ ಪರಿವಾರ ಎಲ್ಲಿದೆ? ಹಿರಿಯರು ಪ್ರಶ್ನಿಸಿದರು.

ಬೆಟ್ಟ ತನ್ನ ಬುಡದಲ್ಲಿದ್ದ ಒಂದು ಮನೆಯನ್ನು ಅವರಿಗೆ ತೋರಿಸಿತು. ಮೂವರು ಹಿರಿಯರು ಆ ಮನೆಯ ಎದುರಿಗೆ  ಬಂದು ನಿಂತರು.

'ನೀವೇಕೆ ಬಾಗಿಲ ಬಳಿ ನಿಂತಿದ್ದೀರಿ?' ಆ ಮನೆಯಿಂದ ಹೆಗ್ಗಣವೊಂದು ಹೊರಗೆ ಬಂದು ಪ್ರಶ್ನಿಸಿತು.

ಮೂವರು ಹಿರಿಯರು ಒಳ ಬಂದು ಹೇಳಿದರು, 'ಬೆಟ್ಟ ನಮ್ಮನ್ನು ನಿಮ್ಮ ಬಳಿಗೆ ಕಳುಹಿಸಿದೆ. ನಿಮ್ಮ ಪರಿವಾರ ಅವನಿಗಿಂತ ಬಲಶಾಲಿಯಂತೆ. ನಾವು ನಿಮ್ಮ ಪರಿವಾರದ ಕನ್ಯೆಯನ್ನು ನಮ್ಮ ಸುಂದರ ಇಲಿಗೆ ಬೇಡಲು ಬಂದಿದ್ದೇವೆ'

'ನೀವು ಸರಿಯಾದ ಮನೆಗೆ ಬಂದಿದ್ದೀರಿ. ನಿಮ್ಮ ಇಲಿಗೆ ನಮ್ಮ ಪರಿವಾರದಲ್ಲಿ ಯೋಗ್ಯ ಕನ್ಯೆಯಿದ್ದಾಳೆ. ನಾವು ಅವಳನ್ನು ನಿಮ್ಮ ಯುವ ಇಲಿಗೆ ಖಂಡಿತ ಮದುವೆ ಮಾಡಿ ಕೊಡುತ್ತೇವೆ' ಎಂದು ಹೆಗ್ಗಣ ಸಂತಸ ವ್ಯಕ್ತಪಡಿಸಿತು.

ಹೀಗೆ ಬಿಳಿ ಮತ್ತು ಸುಂದರ ಇಲಿಗೆ ಯೋಗ್ಯ ವಧು ಸಿಕ್ಕಿತು.

ಇಥಿಯೋಪಿಯಾ ಕಥೆ

(ಆಧಾರ) **ಡಿ.ಎನ್.ಶ್ರೀನಾಥ್**